ಸಾಕ್ಷಿಯನ್ನು ದಿಃ 13.09.2023 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು

**ಮುಂದುವರಿದ ಮುಖ್ಯ ವಿಚಾರಣೆ ಃ ಸರಕಾರಿ ಅಭಿಯೋಜಕರವರಿಂದ ಃ**

8. ನಾನು ನೋಡಿದಾಗ ನನ್ನ ಮಗಳ ಶವ ಹೊಳೆ ಅಂಚಿನಲ್ಲಿ ಕಾಲು ನೀರಿನಲ್ಲಿ ದೇಹ ಮೆಟ್ಟಿಲ ಮೇಲೆ ಇತ್ತು. ಅಲ್ಲಿದ್ದ ಇಬ್ಬರಲ್ಲಿ ಒಬ್ಬ ದೋಣಿ ನಡೆಸುವ ಮಹದೇವನು ತಾನು ಆಚೆ ಕಡೆಯಿಂದ ದೋಣಿಯನ್ನು ನಡೆಸಿಕೊಂಡು ಬರುತ್ತಿದ್ದಾಗ ಒಂದು ಹೆಣ್ಣು ಮಗು ಕಿರುಚುವ ಶಬ್ದ ಕೇಳಿಸಿತು. ಆ ಶಬ್ದ ಬಂದ ಕಡೆಗೆ ದೋಣಿಯನ್ನು ನಡೆಸಿಕೊಂಡು ಬಂದು ನೋಡಿದಾಗ ನನ್ನ ಮಗಳನ್ನು ಆರೋಪಿಯು ನೀರಿನಲ್ಲಿ ಮುಳುಗಿಸಿ ಮುಳುಗಿಸಿ ಸಾಯಿಸಿರುತ್ತಾನೆ ಮತ್ತು ಗಂಡುಮಗುವನ್ನು ನೀರಿಗೆ ಎಸೆದ ಶಬ್ದ ಕೇಳಿಸಿರುತ್ತದೆ ಎಂಬುದಾಗಿ ತಿಳಿಸಿರುತ್ತಾನೆ. ನಂತರ ತಾಯಿ ಮತ್ತು ಮಗುವನ್ನು ನೀರಿನಿಂದ ಹೊರ ತೆಗೆದಾಗ ತಾಯಿಯು ತೀರಿಕೊಂಡಿದ್ದಳು. ಮಗು ಬದುಕಿರುತ್ತದೆ ಎಂಬುದಾಗಿ ತಿಳಿಸಿರುತ್ತಾನೆ. ನಾನು ಅಲ್ಲಿಗೆ ಹೋಗುವಷ್ಟರಲ್ಲಿ ಒಂದು ಅಂಬುಲೆನ್ಸ ನಲ್ಲಿ ಇಬ್ಬರು ಮಕ್ಕಳನ್ನು ಕಳುಹಿಸಿಕೊಟ್ಟಿದ್ದರು.

ಪೊಲೀಸರು ಬಂದಾಗ ಆತನ ಹೆಸರು ಮಹದೇವ ಎಂಬುದಾಗಿ ಹೇಳಿದ್ದರಿಂದ ನನಗೆ ಆ ಹೆಸರು ಗೊತ್ತಾಗಿರುತ್ತದೆ.

9. ಆನಂತರ ನಾನು ರಾತ್ರಿ 8.30 ಗಂಟೆ ಸುಮಾರಿಗೆ ನಂಜನಗೂಡು ಪೊಲೀಸ್ ಠಾಣೆಗೆ ಹೋಗಿ ದೂರನ್ನು ಬರೆಸಿ ಕೊಟ್ಟಿರುತ್ತೇನೆ. ಠಾಣೆಯ ಪಕ್ಕದಲ್ಲಿ ಇದ್ದವರ ಕಡೆಯಿಂದ ನಾನು ಒಕ್ಕಣೆಯನ್ನು ಹೇಳಿ ದೂರನ್ನು ಬರೆಸಿರುತ್ತೇನೆ. ದೂರನ್ನು ನಾನು ಹೇಳಿದ ಪ್ರಕಾರ ಬರೆದು ಕೊಟ್ಟಿದ್ದೇನೆ ತೆಗೆದುಕೊಂಡು ಹೋಗಿ ಕೊಡಿ ಎಂಬುದಾಗಿ ಅವರು ನನಗೆ ಹೇಳಿರುತ್ತಾರೆ. ನಂತರ ನಾನು ಲಿಖಿತ ದುಃರನ್ನು ತೆಗೆದುಕೊಂಡು ಹೋಗಿ ಪೊಲೀಸ್ ಠಾಣೆಗೆ ಕೊಟ್ಟಿರುತ್ತೇನೆ. ಆ ದೂರಿಗೆ ನಾನು ಎರಡು ಕಡೆ ಹೆಬ್ಬೆಟ್ಟು ರುಜು ಮಾಡಿದ್ದೇನೆ. ದುಃರನ್ನು ನಿಪಿ 1 ಎಂದು ಗುರುತಿಸಾಯಿತು.

10. ರಾತ್ರಿ 9 ಗಂಟೆ ಸುಮಾರಿಗೆ ಪೊಲೀಸರು ನನ್ನ ಜೊತೆಗೆ ಮತ್ತಿಬ್ಬರನ್ನು ಜೀಪಿನಲ್ಲಿ ಕೂರಿಸಿಕೊಂಡು ಹೊಳೆ ಹತ್ತಿರ ಇರುವ ಸ್ಥಳಕ್ಕೆ ಕರೆದುಕೊಂಡು ಬಂದಿರುತ್ತಾರೆ. ನನ್ನ ಮಗಳ ಶವ ಇದ್ದ ಸ್ಥಳವನ್ನು ನಾನು ತೋರಿಸಿರುತ್ತೇನೆ. ಆ ಸ್ಥಳದಲ್ಲಿ ದೇವಸ್ಥಾನದ ಲೈಟ್ ಕಂಬದ ಬೆಳಕು ಇತ್ತು. ಆ ವಿದ್ಯುತ್ ಕಂಬದ ಬೆಳಕಿನಲ್ಲಿ ಪೊಲೀಸರು ಅರ್ಧ ಗಂಟೆವರೆಗೆ ಇದ್ದು ಬರವಣಿಗೆ ಮಾಡಿಕೊಂಡಿರುತ್ತಾರೆ. ಬರವಣಿಗೆ ಮಾಡಿಕೊಂಡಿದ್ದಕ್ಕೆ ನಾನು ಹೆಬ್ಬೆಟ್ಟು ರುಜುವನ್ನು ಮತ್ತು ನನ್ನ ಜೊತೆ ಇದ್ದ ಮತ್ತಿಬ್ಬರು ಸಹಿಯನ್ನು ಮಾಡಿರುತ್ತಾರೆ. ಮಹಜರ್ ನ್ನು ನಿಪಿ 2 ಎಂದು ಗುರುತಿಸಲಾಯಿತು. ಮಹಜರ್ ಕಾಲದಲ್ಲಿ ಪೊಲೀಸರು ಫೋಟೋ ತೆಗೆಸಿರುತ್ತಾರೆ. ಫೋಟೋವನ್ನು ನಿಪಿ 3 ಎಂದು ಗುರುತಿಸಲಾಯಿತು. ನಿಪಿ 3 ರಲ್ಲಿ ನಾನು ಸಹ ಇದ್ದೇನೆ.

11. ನನ್ನ ಅಳಿಯ ಪಕ್ಕದ ಮನೆಯ ಹುಡುಗನನ್ನು ನೋಡುತ್ತೀಯಾ ಎಂದು ನನ್ನ ಅಳಿಯನು ನನ್ನ ಮಗಳ ಮೇಲೆ ಅನುಮಾನ ಪಟ್ಟು ಈ ರೀತಿಯಾಗಿ ಆಕೆಯನ್ನು

ನೀರಿನಲ್ಲಿ ಮುಳುಗಿಸಿ ಆಕೆಯನ್ನು ಕೊಲೆ ಮಾಡಿರುತ್ತಾನೆ. ಈಗ ನನ್ನ ಮಗಳ ಎರಡು ಮಕ್ಕಳು ನನ್ನ ಬಳಿ ಇರುತ್ತಾರೆ. ಅವರು ವಿದ್ಯಾಭ್ಯಾಸವನ್ನು ನಾನೇ ಮಾಡಿಸುತ್ತಿದ್ದೇನೆ.

12. ನನ್ನ ಅಳಿಯನು ಈಗ ನ್ಯಾಯಾಲಯದ ಮುಂದಿರುವ ಆರೋಪಿಯೇ ಆಗಿರುತ್ತಾನೆ.

**ಪಾಟೀ ಸವಾಲು ಃ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಮುಂದೂಡಲಾಯಿತು**

(ನನ್ನ ಉ ಮೇ ತೆ ನ್ಯಾ ಬೆ ಮಾಡಲಾಯಿತು)

**ಓ ಹೇ ಕೇ ಸ ಇ**

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,

ಮೈಸೂರು